ಆ) ಇಲ್ಲ.

ಇ) ಇಲ್ಲ, ಈಗಾಗಲೇ ನೀಡಿರುವ ನಿರ್ದೇಶನಗಳಂತೆ ಸಮೀಕ್ಷೆ ನಡೆಸಿದ್ದಲ್ಲಿ ಯಾವುದೇ ಅನ್ಯಾಯವಾಗುವುದನ್ನು ಅವಕಾಶವಿರುವುದಿಲ್ಲ.

ಈ) ಮನೆ ಮನೆ ಸಮೀಕ್ಷೆಯಲ್ಲಿ ಅರ್ಹರಿರುವ ಎಲ್ಲಾ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ನೀಡಲು ಸರ್ಕಾರದ ಆದೇಶ ದಿನಾಂಕ : 10–01–2005ರಲ್ಲಿ ನಿರ್ದೇಶನ ನೀಡಲಾಗಿದೆ.

ರೈತ ಸಂಪರ್ಕ ಕೇಂದ್ರಗಳನ್ನು ಮಂಜೂರು ಮಾಡುವುದು :

5600 ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ (ಕಲಘಟಗಿ) :– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ವಿಧಾನಸಭಾ ಕ್ಷೇತ್ರದಲ್ಲಿರುವ ರೈತ ಸಂಪರ್ಕ ಕೇಂದ್ರಗಳೆಷ್ಟು ಹಾಗೂ ಅವು ಯಾವುವು;

ಆ) ರೈತ ಸಂಪರ್ಕ ಕೇಂದ್ರಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ರೈತ ಸಂಪರ್ಕ ಕೇಂದ್ರಗಳನ್ನು ಹೊಸದಾಗಿ ತೆರೆಯುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಎಷ್ಟು ಕೇಂದ್ರಗಳನ್ನು ಮಂಜೂರು ಮಾಡಲಾಗುವುದು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) :

ಅ) ಕಲಘಟಗಿ ಮತ್ತು ಹುಬ್ಬಳ್ಳಿ ತಾಲ್ಲೂಕುಗಳ ತಲಾ 3 ರೈತ ಸಂಪರ್ಕ ಕೇಂದ್ರಗಳು ಕಲಘಟಗಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇವೆ. ಅವುಗಳೆಂದರೆ ಕಲಘಟಗಿ ತಾಲ್ಲೂಕಿನ ಕಲಘಟಗಿ, ದುಮ್ಮವಾಡ ಮತ್ತು ತಬಕದಹೊನ್ನಳ್ಳಿ ಹಾಗೂ ಹುಬ್ಬಳ್ಳಿ ತಾಲ್ಲೂಕಿನ ಛಬ್ಬಿ ಹುಬ್ಬಳ್ಳಿ ಮತ್ತು ಶಿರಗುಪ್ಪಿ ಕೇಂದ್ರಗಳು.

ಆ) ಹೌದು.

ಇ) ಹಾಲಿ ಇರುವ ಕೇಂದ್ರಗಳಲ್ಲಿಯೇ ಸಿಬ್ಬಂದಿ ಕೊರತೆ ಇರುವುದರಿಂದ ಮತ್ತು ಇಲಾಖೆಯ ಪುನರ್ ಸಂಘಟನೆ ಕುರಿತು ವಿಷಯ ಪರಿಶೀಲನೆಯಲ್ಲಿರುವುದರಿಂದ ಹೊಸ ಕೇಂದ್ರಗಳನ್ನು ತೆರೆಯಲು ಪರಿಗಣಿಸಲಾಗುತ್ತಿಲ್ಲ.

ಈ) ಉದ್ಭವಿಸುವುದಿಲ್ಲ.